ಮಂಡ್ಯ ನಗರ ಸಭೆಯ ಸರಹದ್ದನ್ನು ವಿಸ್ತರಿಸುವುದು

31(173); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಮಂಡ್ಯ ನಗರಸಭೆಯ ಸರಹದ್ದನ್ನು ಆರು ಕಿ.ಮೀ. ಫಾಸಲೆಯವರೆಗೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ನಗರ ಸಭೆಯ ಮುಂದೆ ಇದೆಯೇ; ಯಾವ ಯಾವ ಹಳ್ಳಿಗಳನ್ನು ಈ ನಗರಸಭೆಯ ವ್ಯಾಪ್ತಿಗೆ ಸೇರಿಸಲಾಗುವುದು?

ಆ) ಮಂಡ್ಯ ನಗರದಲ್ಲಿ ಹಾದ ಹೋಗುವ ಮೈಸೂರು–ಬೆಂಗಳೂರು ಎಂ.ಪಿ. ರಸ್ತೆಗೆ ನಗರದ ಹೊರ ವಲಯದಲ್ಲಿ ಬೈಪಾಸ್ ರಸ್ತೆ ನಿರ್ಮಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ; ಈ ಬಗ್ಗೆ ನಗರಸಭೆ ಮತ್ತು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಮಂಡ್ಯ ನಗರಸಭೆಯ ಸರಹದ್ದನ್ನು ಆರು ಕಿ.ಮೀ. ಫಾಸಲೆಯವರೆಗೆ ವಿಸ್ತರಿಸುವ ಪ್ರಸ್ತಾವನೆ ನಗರಸಭೆಯ ಮುಂದೆ ಇರುತ್ತದೆ.

ಮಂಡ್ಯ ನಗರಕ್ಕೆ ಹೊಂದಿಕೊಂಡಂತಿರುವ 5–6 ಹೊಸ ಬಡಾವಣೆಗಳನ್ನು ಮೊದಲ ಹಂತದಲ್ಲಿ ಸೇರಿಸಿಕೊಳ್ಳುವ ಬಗ್ಗೆ ನಗರಸಭೆಯ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ಆ) ಮೈಸೂರು–ಬೆಂಗಳೂರು ಎಂ.ಪಿ. ರಸ್ತೆಗೆ ಮಂಡ್ಯ ನಗರದ ಹೊರ ವಲಯದಲ್ಲಿ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ ನಗರಸಭೆಯ ಹಂತದಲ್ಲಿ ಐ.ಡೆಕ್ ಸಂಸ್ಥೆಯ ಸಹಯೋಗದಿಂದ ಯೋಜನಾ ವರದಿಯನ್ನು ಸಿದ್ದಪಡಿಸಲಾಗುತ್ತಿದೆ.